**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ .**

**ಸಿ.ಸಿ ನಂಃ 60/ 2020**

| | | |
|---|---|---|
| **ಸಾಕ್ಷಿಯ ಹೆಸರಃ** | **ಸಂತೋಷ ಎನ್** | **ಪ್ರಾಸಾಃ 3** |
| **ತಂದೆಯ ಹೆಸರುಃ** | **ನಿಂಗೇಗೌಡ** | **ಚಾಸಾಃ 3** |
| **ವಯಸ್ಸುಃ** | **39 ವರ್ಷ** | **ದಿಃ 21-05-2026** |
| **ಉದ್ಯೋಗಃ** | **ಅಬಕಾರಿ ಮುಖ್ಯ ಪೇದೆ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಮೈಸೂರು** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು ದಿಃ28.08.2015 ರಿಂದ ದಿಃ10.12.2020 ರವರೆಗೆ ಕೆ.ಆರ್.ನಗರದ ಅಬಕಾರಿ ನೀರಿಕ್ಷಕರ ವಲಯ ಕಚೇರಿಯಲ್ಲಿ ಅಬಕಾರಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತಿರುತ್ತೇನೆ.

ದಿಃ 18.03.2019 ರಂದು ಚಾಸಾ-4 ಮತ್ತು 7 ರವರ ಜೊತೆ ನಾನು 2019 ರ ಲೋಕಸಭಾ ಚುನಾವಣೆ ನಿಮಿತ್ತ ಕೆ.ಆರ್.ನಗರ ತಾಲ್ಲೂಕಿನ ಮಿರ್ಲೆ ಹೋಬಳಿಯ ವ್ಯಾಪ್ತಿಯಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ-7 ರವರಿಗೆ ಬಂದ ಮಾಹಿತಿಯ ಮೇರೆಗೆ ನಾವುಗಳು ನಮ್ಮ ಇಲಾಖಾ ವಾಹನ ಕೆಎ-09-ಜಿ-743 ನಲ್ಲಿ ಮಿರ್ಲೆ ಗ್ರಾಮದ ಅರಳಿಮರ ಸರ್ಕಲ್ ಬಳಿ ತೆರಳಿ ಅಲ್ಲೆ ನಿಂತಿದ್ದ ಚಾಸಾ-1 ಮತ್ತು 2 ರವರನ್ನು ಪಂಚರಾಗಿ ಬರಮಾಡಿಸಿಕೊಂಡು ಅವರಿಗೆ ಬಾತ್ಮಿ ಬಂದ ವಿಷಯವನ್ನು ತಿಳಿಸಿ ಪಂಚರಿಗೆ ಸ್ಥಳದಲ್ಲಿಯೇ ನೋಟಿಸನ್ನು ಜಾರಿ ಮಾಡಿ ನಮ್ಮೊಂದಿಗೆ ಪಂಚರಾಗಿ ಬರುವಂತೆ ಕೋರಿದ್ದು, ಚಾಸಾ-1 ಮತ್ತು 2 ರವರು ನಮ್ಮೊಂದಿಗೆ ಪಂಚರಾಗಿ ಬರಲು ಒಪ್ಪಿರುತ್ತಾರೆ.

ನ್ಯಾಯಾಲಯದಿಂದ ಶೋಧನಾ ವಾರೆಂಟ್ ನ್ನು ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದಿದ್ದ ಕಾರಣ ವಿಳಂಬ ಮಾಡಿದರೆ ಸಾಕ್ಷ್ಯ ನಾಶಮಾಡುವ ಅಥವಾ ಮರೆಮಾಚುವ ಸಂಭವವಿದ್ದ ಕಾರಣ ಅಬಕಾರಿ ಕಾಯಿದೆ ಕಲಂ 54 ರ ರೀತ್ಯ ಶೋಧನಾ ಸಮುಚ್ಚಿತ ಆಧಾರ

ಪತ್ರವನ್ನು ಸ್ಥಳದಲ್ಲಿಯೇ ತಯಾರಿಸಿ ಪಂಚರ ಸಹಿ ಪಡೆದು ಶೋಧಿಸುವ ಮುಂಚೆ ನಾವು ಮತ್ತು ಪಂಚರರು ಪರಸ್ಪರ ಅಂಗಶೋಧನೆ ನಡೆಸಿ, ಯಾವುದೇ ಅಬಕಾರಿ ವಸ್ತುಗಳ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ನಾಟನಹಳ್ಳಿ ಗ್ರಾಮದಲ್ಲಿದ್ದ ಆರೋಪಿಯ ಕೋಳಿ ಅಂಗಡಿಯ ಬಳಿ ತೆರಳಿದಾಗ ಒಬ್ಬ ಆಸಾಮಿಯು ಅಂಗಡಿಯಲ್ಲಿದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ಹಾಗೂ ನಮ್ಮ ಇಲಾಖಾ ವಾಹನವನ್ನು ನೋಡಿ ಓಡಲು ಆರಂಭಿಸಿರುತ್ತಾನೆ.

ನಂತರ ನಾವು ವಾಹನವನ್ನು ನಿಲ್ಲಿಸಿ ಸದರಿ ಆಸಾಮಿಯನ್ನು ಹಿಡಿಯಲು ಪ್ರಯ್ನಿಸಿದರು ಸಹ ಆತನು ನಮ್ಮ ಕೈಗೆ ಸಿಕ್ಕಿರುವುದಿಲ್ಲ. ನಂತರ ಸಂಜೆ ಸುಮಾರು 5.00 ಗಂಟೆಗೆ ನಾವು ಮತ್ತು ಪಂಚರು ಆರೋಪಿಯ ಅಂಗಡಿಯ ಒಳಭಾಗಕ್ಕೆ ಪ್ರವೇಶಿಸಿದಾಗ ಅಂಗಡಿಯ ಒಂದು ಮೂಲೆಯಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲವಿದ್ದು, ಅದನ್ನು ತೆರೆದು ನೋಡಲಾಗಿ, ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಕಂಡುಬಂದಿದ್ದು, ಅದನ್ನು ಪಂಚರ ಸಮಕ್ಷಮ ಎಣಿಸಿ ನೋಡಲಾಗಿ 90 ಎಂ.ಎಲ್ ನ 115 ಓರಿಜಿನಲ್ ಚಾಯ್ಸು ಡಿಲಕ್ಸ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಇದ್ದು ಅವುಗಳ ಒಟ್ಟು ಪ್ರಮಾಣ 10.350 ಲೀಟರ್ ಆಗಿರುತ್ತದೆ.

ನಂತರ ಅಕ್ರಮವಾಗಿ ಮದ್ಯಗಳನ್ನು ವಶದಲ್ಲಿ ಇಟ್ಟು ಮಾರಾಟ ಮಾಡುವುದು ಅಬಕಾರಿ ಕಾಯ್ದೆಯಡಿ ಅಪರಾಧವಾಗಿರುತ್ತದೆ ಎಂದು ಪಂಚರಿಗೆ ತಿಳಿಸಿ ಓಡಿ ಹೋದ ಸದರಿ ಆಸಾಮಿಯ ಹೆಸರು ಮತ್ತು ವಿಳಾಸವನ್ನು ಪಂಚರಲ್ಲಿ ಕೇಳಲಾಗಿ ಜಯಣ್ಣ ಬಿನ್ ಲೇಟ್ ತಮ್ಮೇಗೌಡ, 47 ವರ್ಷ, ನಾಟನಹಳ್ಳಿ ಗ್ರಾಮ, ಮಿರ್ಲೆ ಹೋಬಳಿ, ಕೆ.ಆರ್.ನಗರ ತಾಲ್ಲೂಕು ಎಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ದೊರೆತ ಮದ್ಯಗಳ ಪೈಕಿ 20 ಓರಿಜಿನಲ್ ಚಾಯ್ಸು ಡಿಲಕ್ಸ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿಯಾಗಿ ಪಡೆಯಲು ಬಿಳಿ ಚೀಲದಲ್ಲಿ ಹಾಕಿ ದಾರದಿಂದ ಕಟ್ಟಿ ಇಲಾಖಾ ಮುದ್ರೆಯ ಸಂಖ್ಯೆ 296 ದಿಂದ ಮೊಹರು ಮಾಡಿ, ಮಾದರಿ ಮುದ್ರೆಯನ್ನು ತಯಾರಿಸಿ, ಪ್ರಕರಣದ ವಿವರಗಳನ್ನು ಬರೆದು ಅದಕ್ಕೂ ಪಂಚರಗಳ ಸಹಿಗಳನ್ನು ಪಡೆದು ಮಾದರಿ ತೆಗೆದ ಚೀಲದ ಮೇಲೆ ಅಂಟಿಸಲಾಯಿತು. ರಾಸಾಯನಿಕ ವಿಶ್ಲೇಷಣೆಗಾಗಿ ಕೇವಲ 20 ಓರಿಜಿನಲ್ ಚಾಯ್ಸು ಡಿಲಕ್ಸ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳನ್ನು ಮಾತ್ರ ಮಾದರಿಯಾಗಿ ಪಡೆದಿದ್ದು, ಕಣ್ಣು ತಪ್ಪಿನಿಂದ ನಿಪಿ.1 ರ ದಾಖಲೆಯಲ್ಲಿ 26 ಓರಿಜಿನಲ್ ಚಾಯ್ಸು ಡಿಲಕ್ಸ ವಿಸ್ಕಿಯ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳನ್ನು ಮಾದರಿಯಾಗಿ ಪಡೆದಿರುತ್ತಾರೆ ಎಂದು ತಪ್ಪಾಗಿ ನಮೂದಿಸಿರುತ್ತಾರೆ.

ಘಟನಾ ಸ್ಥಳದ ಚೆಕ್ಕುಬಂಧಿ ಪೂರ್ವಕ್ಕೆ-ನಾಟನಹಳ್ಳಿ ರಸ್ತೆ, ಪಶ್ಚಿಮಕ್ಕೆ-ವಿಜಯ್ ಕುಮಾರ್ ರವರ ಮನೆ, ಉತ್ತರಕ್ಕೆ-ರಾಮದಾಸ್ ರವರ ಮನೆ, ದಕ್ಷಿಣಕ್ಕೆ-ಶಾಬಾಳುವಿಗೆ

ಹೋಗುವ ರಸ್ತೆ ಇತ್ತು. ಘಟನಾ ಸ್ಥಳದ ಪಂಚನಾಮೆಯನ್ನು ಸಂಜೆ 5.30 ಗಂಟೆಯಿಂದ 6.30 ಗಂಟೆಯವರೆಗೆ ಸ್ಥಳದಲ್ಲಿಯೇ ಬರೆಯಲಾಗಿರುತ್ತದೆ. ನಿಪಿ.1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ನಂತರ ದೂರಿತ ಮದ್ಯಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ವಹಿಸಲಾಗಿರುತ್ತದೆ.

ಚಾಸಾ 8 ರವರ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮದ್ಯಗಳನ್ನು ದಿನಾಂಕ 21.03.2019 ರಂದು ಬೆಂಗಳೂರಿನ ಕೇಂದ್ರ ರಾಸಾಯನಿಕ ತಜ್ಞರ ಪ್ರಯೋಗಾಲಯಕ್ಕೆ ತಲುಪಿಸಿರುತ್ತೇನೆ. ದಿನಾಂಕ 26.04.2019 ರಂದು ಕೇಂದ್ರ ರಾಸಾಯನಿಕ ತಜ್ಞರ ಪ್ರಯೋಗಾಲಯದಿಂದ ನೀಡಿದ ವರದಿಯನ್ನು ತಂದು ಕಛೇರಿಗೆ ತಲುಪಿಸಿರುತ್ತೇನೆ. ಸಾಕ್ಷಿಯು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ದಿಃ 21.03.2019 ರಂದು ರಾಸಾಯನಿಕ ಪ್ರಯೋಗಾಲಯಕ್ಕೆ ಸಲ್ಲಿಸಿದ ನಿವೇದನೆಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

ಓರಿಜಿನಲ್ ಚಾಯ್ಸ್ ಡಿಲಕ್ಸ ವಿಸ್ಕಿಯ 20 ಖಾಲಿ ಟೆಟ್ರಾ ಪ್ಯಾಕೇಟ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು-1 ಎಂದು, ಆರೋಪಿಯು ಮಧ್ಯಗಳನ್ನು ಸಂಗ್ರಹಿಸಿ ಇಟ್ಟಿದ್ದ ಬಿಳಿ ಪ್ಲಾಸ್ಟೀಕ್ ಕೈ ಚೀಲವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಟಿ.ಜಿ ವಕೀಲರಿಂದ

**ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲು ಯಾವುದೇ ಸಕಾರಣಗಳಿಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ